ದಿಃ **21-06-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

8) ಪ್ರತಿವಾದಿಯ ತಂದೆ ವಾದಿಯ ತಂದೆಗೆ ದಾವಾಸ್ವತ್ತನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿಯ ತಂದೆ ವಾದಿಯ ತಂದೆಗೆ ಕರಾರು ಪತ್ರ ಮಾಡಿಕೊಟ್ಟಿದ್ದಕ್ಕಾಗಿ ವಾದಿಯ ತಂದೆ ದಾವಾಸ್ವತ್ತಿನ ಮೇಲೆ ತನ್ನ ಹೆಸರನ್ನು ದಾಖಲಿಸಿಕೊಂಡಿರುತ್ತಾನೆ ಎಂದು ಹಿಂದಿನ ಮುದ್ದತ್ತಿನ ಪಾಟೀ ಸವಾಲಿನಲ್ಲಿ ತಿಳಿಸಿರುವ ಸಂಗತಿ ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

9) ದಾವಾಸ್ವತ್ತಿನ ಕುರಿತು ಕರಾರು ಪತ್ರವು ನಮ್ಮೂರಿನ ಲಕ್ಷ್ಮೀದೇವಿ ಗುಡಿಯಲ್ಲಿ ಆಗಿರುತ್ತದೆ. ಪ್ರತಿವಾದಿಯ ತಂದೆ ವಾದಿಯ ತಂದೆಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾನೆ. ನಾನು ಸದರಿ ಕರಾರು ಪತ್ರ ಮಾಡಿಕೊಡುವ ಸಮಯದಲ್ಲಿ ನಮ್ಮೂರಿನ ಲಕ್ಷ್ಮೀ ದೇವಿಯ ಗುಡಿಯಲ್ಲಿ ಇದ್ದೆ. ಸದರಿ ಕರಾರು ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಪ್ರತಿವಾದಿಯ ತಂದೆ ಆರ್ಥಿಕವಾಗಿ ಸದೃಢನಾಗಿರುವುದರಿಂದ ದಾವಾಸ್ವತ್ತನ್ನು ಮಾರಾಟ ಮಾಡಲು ಯವತ್ತೂ ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನಾನುಭವದಲ್ಲಿ ಪ್ರತಿವಾದಿ 1 ರವರ ತಂದೆ ಜೀವಂತವಿರುವಾಗ ಪ್ರತಿವಾದಿ 1 ರವರ ತಂದೆಯೇ ಇದ್ದರು ಎಂದರೆ ಸರಿಯಲ್ಲ. ಪ್ರತಿವಾದಯ ತಂದೆ ಮೃತನಾದ ನಂತರ ಪ್ರತಿವಾದಿ 1 ರವರು ದಾವಾಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

10) ವಾದಿಯ ತಂದೆ ದಾವಾಸ್ವತ್ತಿನ ಕುರಿತು ಕ್ರಯ ಕರಾರು ಪತ್ರವನ್ನು ಸೃಷ್ಟಿಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ದಾವಾಸ್ವತ್ತಿನ ಕುರಿತು ವಾದಿಯ ತಂದೆಗೆ ಯಾವತ್ತೂ ಕ್ರಯ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆ ಬೇರೆ ಯಾರೋ ವ್ಯಕ್ತಿಯನ್ನು ನಿಲ್ಲಿಸಿ ದಾವಾಸ್ವತ್ತಿನ ಕ್ರಯ ಕರಾರು ಪತ್ರವನ್ನು ದಸ್ತು ಬರಹಗಾರ ಮತ್ತು ಸಾಕ್ಷಿದಾರರೊಂದಿಗೆ ಮಿಲಾಪಿಯಾಗಿ ಸೃಷ್ಟಿ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ವಾದಿಯ ತಂದೆ ಸುಳ್ಳು ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಮಾರಾಟ ಮಾಡಲು ಪ್ರತಿವಾದಿಯ ತಂದೆ ಯಾವತ್ತೂ ತೆಗೆಯದ ಕಾರಣ ಪ್ರತಿವಾದಿ 1 ರವರ ತಂದೆ ಮತ್ತು ವಾದಿಯ ತಂದೆಯ ಮಧ್ಯ ಯಾವುದೇ

ಕ್ರಯ ಕರಾರು ಪತ್ರ ಆಗಿರುವುದಿಲ್ಲ ಮತ್ತು ಮಾತುಕತೆಯೂ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸರ)
ಪ್ರ.ದಿ.&ನ್ಯಾದಂ., ಗೋಕಾಕ.